




## ಸೈಕಲ್‌ನಲ್ಲಿ ಸಂಚಾರಿ ಸಂತೆ

ಸಂತೆಯಲ್ಲಿ ಮಂಡಕ್ಕಿ, ಖಾರ, ಮಿಕ್ಸ್‌ಚರ್, ಚೌ ಚೌ, ಹುರಿದ–ಕರಿದ ಶೇಂಗಾ, ಆಲೂ ಬಾಳೆಕಾಯಿ ಚಿಪ್ಸ್ ಮಾರುತ್ತಿದ್ದ ಈ ವ್ಯಕ್ತಿಯ ಹೆಸರು ಶಾಂತಾರಾಮ ಪ್ರಭು. ಸಂತೆ ಬಿಟ್ಟು ಬೇರೆಡೆ ಬಾರದ ಇವರು ಒಮ್ಮೆ ಸೈಕಲ್‌ನಲ್ಲಿ ಹಲವು ತಿನಿಸು ತುಂಬಿಕೊಂಡು ಮಾರಾಟ ಮಾಡುವುದನ್ನು ಕಂಡೆ. ಆಶ್ಚರ್ಯವಾಯಿತು. ಹಾಗೇ ಮಾತಿಗೆಳೆದೆ. 'ಹಿಂದೆ ಸಂತೆಗೆ ಬರುತ್ತಿದ್ದ ತಮ್ಮ ಕಾಯಂ ಗಿರಾಕಿಗಳ ಮನೆಬಾಗಿಲಿಗೆ ಸೈಕಲ್‌ನಲ್ಲಿ ಹೋಗಿ ತಿನಿಸು ಮಾರಾಟ ಮಾಡುತ್ತಿದ್ದೇನೆ' ಎಂದರು. ಕಾರಣ ಎಂದಾಕ್ಷಣ ಅವರಿಂದ ಬಂದ ಉತ್ತರ, 'ಕೊರೊನಾದ ಹೊಡೆತ'.

ನಮ್ಮಿಬ್ಬರ ಮಾತಿನ ವೇಳೆಯೇ ನಾವಿದ್ದ ಜಾಗಕ್ಕೆ ಬಂದ ಅಕ್ಕಪಕ್ಕದವರೂ ಸೈಕಲ್‌ನಲ್ಲಿದ್ದ ತರಹೇವಾರಿ ತಿನಿಸುಗಳನ್ನು ನೋಡಿ, 'ನಮಗೂ ಕೊಡಿ' ಎಂದು ಶಾಂತರಾಮ ಅವರ ಗ್ರಾಹಕರ ಪಟ್ಟಿಗೆ ಸೇರ್ಪಡೆಗೊಂಡರು. ಇನ್ನು, ಇವರು ಪ್ರತಿದಿನ ತಾಲ್ಲೂಕು ಕೇಂದ್ರದಿಂದ 10–12 ಕಿಲೋ ಮೀಟರ್ ದೂರದವರೆಗೆ ಸೈಕಲ್ ತುಳಿದು ವ್ಯಾಪಾರ ಮಾಡುತ್ತಿದ್ದಾರೆ. ಒಂದೊಂದು ದಿನ ಒಂದೊಂದು ಊರು ಎಂಬಂತೆ ತಮ್ಮ ಸೈಕಲ್ ಅನ್ನೇ ಸಂಚಾರಿ ಸಂತೆ ಮಾಡಿಕೊಂಡಿದ್ದಾರೆ. ಬಿಸಿಲೇರುವ ಮುನ್ನ ವ್ಯಾಪಾರ ಮುಗಿಸಿ ಮನೆ ಸೇರಿ ನಾಳಿನ ತಯಾರಿಯಲ್ಲಿ ತೊಡಗುತ್ತಾರೆ. ನೀವು ಆಟೊ, ಬೈಕ್‌ನಲ್ಲಿ ಹೋಗಿ ವ್ಯಾಪಾರ ಮಾಡಬಹುದಲ್ವಾ? ಎಂದಿದ್ದಕ್ಕೆ 'ದುಡಿತದ ಬಹುತೇಕ ಹಣ ಪೆಟ್ರೋಲ್‌ಗೆ ಸುರಿದರೆ ಹೊಟ್ಟೆಯ ಪಾಡೇನು' ಎಂದು ಮರುಪ್ರಶ್ನಿಸಿದ ಅವರು ಸೈಕಲ್ ಮೇಲೆ ಕೈಸವರಿ, 'ಇದು ವ್ಯಾಯಾಮವೂ ಹೌದು, ಆರೋಗ್ಯಕ್ಕೂ ಸಹಕಾರಿ' ಎಂದರು. 'ಇಷ್ಟು ವರ್ಷ ಸಂತೆಯಲ್ಲಿ ನನ್ನ ಅಂಗಡಿಗೆ ಬರುತ್ತಿದ್ದ ಅನೇಕ ಜನರು ವ್ಯಾಪಾರ ಮಾಡಿ ನನ್ನ ಜೀವನಕ್ಕೆ ನೆರವಾಗಿದ್ದಾರೆ. ಅವರ ಋಣವನ್ನು ತೀರಿಸಲು ನಾನೇ ಅವರಲ್ಲಿಗೆ ಹೋಗಿ ವ್ಯಾಪಾರ ಮಾಡುವುದು ಒಂದು ರೀತಿಯ ನನ್ನ ಕರ್ತವ್ಯವೂ ಹೌದು' ಎನ್ನುವ ಅವರು 'ಕಾಲಕ್ಕೆ ತಕ್ಕಂತೆ ನಡೆಯಬೇಕು' ಅನ್ನುವುದನ್ನು ಮನಗಂಡಿದ್ದಾರೆ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಆ್ಯಂಟ್ ಪಗೋಡ



ಕ್ರೆಮಾಟೊಗಾಸ್ಟರ್ ಜಾತಿಯ ಇರುವೆಗಳು ಮರದ ತೊಗಟೆ, ಒಣ ಎಲೆಗಳನ್ನು ಅಗಿಯುವ ಮೂಲಕ ಉಂಟಾದ ಲಾಲಾರಸಕ್ಕೆ ಮಣ್ಣನ್ನು ಬೆರೆಸಿ ಜಿಗುಟಾದ ಪೇಸ್ಟ್ ತಯಾರಿಸುತ್ತವೆ. ಈ ಪೇಸ್ಟ್‌ಗೆ ಒಣ ಎಲೆಗಳನ್ನು ಜೋಡಿಸಿ ಪಗೋಡ ಆಕಾರದ ಗೂಡನ್ನು ನಿರ್ಮಿಸುತ್ತವೆ. ಈ ಆ್ಯಂಟ್ ಪಗೋಡ ನಮಗೆ ಕಾಣಸಿಕ್ಕಿದ್ದು, ಜೋಗ್ ಫಾಲ್ಸ್ ನಿಂದ 6 ಕಿಲೊಮೀಟರ್ ದೂರದಲ್ಲಿರುವ ಶರಾವತಿ ನೇಚರ್ ಕ್ಯಾಂಪ್‌ನಲ್ಲಿ ಸುತ್ತಾಡುತ್ತಿದ್ದಾಗ. ಶರಾವತಿ ಜಲಾಶಯವನ್ನು ಸುತ್ತುವರಿದಿರುವ ಗುಡ್ಡಗಾಡು ಕಣ್ಮನ ಸೆಳೆಯುತ್ತದೆ.

–ಎಸ್. ಪ್ರಭಾವತಿ, ಬೆಂಗಳೂರು



## ರಾಮನ ಶಾಂತಪ್ರಿಯತೆ ಬೆಳಗುವ ದೀಪ

ಹಲವು ಕವಲುಗಳಿದ್ದರೂ ಬಾಂಧವ್ಯದ ಬುಡ ಒಂದೇ ಆಗಿರಬೇಕೆಂದು ಈ ದೀಪವನ್ನು ಕಂಡಾಗ ನನಗನಿಸಿತು. ಕೇರಳದ ತಲಚೇರಿಯ ರಾಮ ದೇಗುಲದಲ್ಲಿ ಕಂಡ ಈ ದೀಪ ನೋಡಲು ಸುಂದರವಾಗಿದೆ. ಇನ್ನು ದೇವಸ್ಥಾನದ ವಿಶೇಷತೆ ನೋಡುವುದಾದರೆ, ಇಲ್ಲಿ ರಾಮ ನೆಲೆಸಿದ್ದಾರೆ.

ರಾಮನು ಶಾಂತಾರಾಮನೂ ಅರ್ಥಾತ್ ಶಾಂತಪ್ರಿಯನೂ ಹೌದು. ಸೀತಾಪಹರಣದ ನಂತರ ರಾಮ ಶಾಂತವಾದನೆಂಬ ನಂಬಿಕೆ ಇಲ್ಲಿದೆ. ರಾಮ ಶಾಂತಪ್ರಿಯನೆಂಬ ಕಾರಣಕ್ಕೆ ಈ ದೇಗುಲದಲ್ಲಿ ಘಂಟೆ, ಜಾಗಟೆಯ ಸದ್ದಿಲ್ಲದೆ ಇಲ್ಲಿ ಪೂಜೆ ನಡೆಯುತ್ತದೆ. ಇಲ್ಲಿಗೆ ಬರುವ ಭಕ್ತರು ಕೂಡ ಶಾಂತಿಯನ್ನು ಪಾಲಿಸುತ್ತಾರೆ. 'ಇಷ್ಟು ಚೆಂದದ ದೀಪವನ್ನು ರಾಮನ ಮುಂದೆ ಬೆಳಗಿದರೆ ನೋಡುತ್ತಾ ಸುಮ್ಮನೆ ಕುಳಿತಬಿಡೋಣ ಅನಿಸುತ್ತದೆ' ಎಂಬುದು ಸ್ಥಳೀಯರ ಮಾತು. ಈ ದೀಪ ಬಳಕೆಯಲ್ಲಿತ್ತೋ ಇಲ್ಲವೋ ಗೊತ್ತಿಲ್ಲ. ನಾ ನೋಡಿದಾಗ ದೇವಸ್ಥಾನದ ಹಿಂಭಾಗದಲ್ಲಿತ್ತು.

–ನಾಗಲಕ್ಷ್ಮೀ ಪ್ರಭು, ಶಿವಮೊಗ್ಗ